


# ಮಗುವಿನ ಮಾತು

ಮಗುವಿಗೆ ಕಿವಿ ಕೇಳಿಸುವುದಿಲ್ಲ ಎಂದರೆ ಮಾತೂ ಬರುವುದಿಲ್ಲ ಎಂದರ್ಥ. ಚಿಕ್ಕವಯಸ್ಸಿನಲ್ಲೇ ಈ ದೌರ್ಬಲ್ಯವನ್ನು ಗುರುತಿಸಿ ಚಿಕಿತ್ಸೆ ನೀಡುವುದು ಒಳ್ಳೆಯದು. ಮೈಸೂರಿನ ಆಯಿಷ್ ಸಂಸ್ಥೆಯಲ್ಲಿ ಇಂತಹ ಮಕ್ಕಳ ಮಾತಿಗಾಗಿ ಅತ್ಯುತ್ತಮ ತರಬೇತಿ ಸಿಗುತ್ತಿದೆ. ಆದರೆ ಆ ತರಬೇತಿ ಅಷ್ಟು ಸುಲಭವಲ್ಲ. ತಮ್ಮ ಮಗುವನ್ನು ಸಾಮಾನ್ಯ ಮಗುವಿನಂತೆ ಬೆಳೆಸಲು ಈ ಪೋಷಕರು ಅದೆಷ್ಟೊಂದು ತ್ಯಾಗ ಮಾಡುತ್ತಾರೆ!

★ ಡಾ. ಎಂ.ಪುಷ್ಪಾವತಿ
ಲೀಲಾರಾಣಿ ಎಸ್.ಬಿ.

ಆಲಿಷಾ ಮೂರು ವರ್ಷದ ಕಂದಮ್ಮ. ಮುದ್ದಾದ ಮಗುವಿನ ಆಟ ಓಟಗಳು ಅವಳ ಅಪ್ಪ ಅಮ್ಮನಿಗೆ ಮುದ ನೀಡಬೇಕಾಗಿತ್ತು. ಆದರೆ ಮಗುವಿನ ವರ್ತನೆಯಲ್ಲಿ ಚುರುಕುತನ ಇರಲಿಲ್ಲ. ಕೂಗಿದರೂ ತಿರುಗಿ ನೋಡದೆ ಅವಳ ಪಾಡಿಗೆ ಅವಳು ಆಡುತ್ತಿದ್ದಳು. ಓಲಗದ ಸದ್ದು ಕೇಳಿ ಬೆಚ್ಚುವ ಇತರ ಮಕ್ಕಳ ನಡುವೆ ನಿರ್ಭೀತಿಯಿಂದ ನಿಂತು ನೋಡುತ್ತಿದ್ದಳು. ತೊದಲು ನುಡಿಗಳಿಂದ ಅಪ್ಪ ಅಮ್ಮನನ್ನು ರಮಿಸಿ ನಗಿಸುವ ಓರಗೆಯ ಮಕ್ಕಳ ನಡುವೆ ಮೌನವಾಗಿ ನಿಲ್ಲುವ ಅವಳ ವರ್ತನೆ– ಎಲ್ಲವೂ ಪೋಷಕರ ಚಿಂತೆಗೆ ಕಾರಣವಾಗಿತ್ತು. ಇಷ್ಟೆಲ್ಲವೂ ಅವರ ಗಮನಕ್ಕೆ ಬಂದಿದ್ದರೂ ವೈದ್ಯಕೀಯ ಸಲಹೆ ಪಡೆಯಲು ಅಪ್ಪ, ಅಮ್ಮ ಮುಂದಾಗಲಿಲ್ಲ. ಮನೆಯ ಹಿರಿಯರು ಹೇಳಿದಂತೆ, 'ನಿಧಾನವಾಗಿ ಮಾತನಾಡುತ್ತಾಳೆ ಬಿಡು, ಅವಳ ದೊಡ್ಡಪ್ಪನೂ ಹೀಗೆ 6 ವರ್ಷಕ್ಕೆ ಮಾತಾಡಿದ್ದ..' ಎಂದೆಲ್ಲ ಸಮಾಧಾನದ ನುಡಿಗಳನ್ನು ಕೇಳುತ್ತಾ ದಿನ ದೂಡಿದರು. ತಿಂಗಳುಗಳೇ ಉರುಳಿಹೋದವು.

ಕಡೆಗೊಮ್ಮೆ ಹಿರಿಯರ, ಮನೆಯವರ ಮನ ಒಲಿಸಿದ ತಾಯಿ, ಮಕ್ಕಳ ವೈದ್ಯರ ಬಳಿ ಮಗುವನ್ನು ಕರೆತಂದಳು. ಮಕ್ಕಳ ವೈದ್ಯರು ಮಗುವಿನ ವರ್ತನೆಗೆ ಸಂಬಂಧಿಸಿದಂತೆ ತಾಯಿಗೆ ಹಲವು ಪ್ರಶ್ನೆಗಳನ್ನು ಕೇಳಿದರು. ಮಗು ಶಬ್ದ ಬಂದ ಕಡೆಗೆ ತಿರುಗಿ ನೋಡುತ್ತದೆಯೇ? ನೀವು ಕೇಳಿದ ವಸ್ತುವನ್ನು ತಂದುಕೊಡುತ್ತದೆಯೇ? ಅಪ್ಪ, ಅಮ್ಮ ಮತ್ತಿತರ ಯಾವುದಾದರೂ ಪದಗಳನ್ನು ಉಚ್ಚಾರ ಮಾಡುತ್ತದೆಯೇ?– ಹೀಗೆ ಹಲವು ಪ್ರಶ್ನೆಗಳಿಗೆ ತಾಯಿಯು ನೀಡಿದ ಉತ್ತರ 'ಇಲ್ಲ' ಎಂಬುದೊಂದೇ ಆಗಿತ್ತು. ಉತ್ತರ ನೀಡುತ್ತಿದ್ದ ತಾಯಿಯ ಮೊಗದಲ್ಲಿ ಆತಂಕದ ಛಾಯೆ ಆವರಿಸಿತು. ವೈದ್ಯರ ಸಲಹೆಗಾಗಿ ಮನಸ್ಸು ತವಕಿಸಿತು. ವೈದ್ಯರು 'ನೀವು ಮಗುವನ್ನು ಕಿವಿ, ಮೂಗು, ಗಂಟಲು ತಜ್ಞರ ಬಳಿಗೆ ಸೂಕ್ತ ತಪಾಸಣೆಗಾಗಿ ಕರೆದೊಯ್ಯುವುದು ಒಳಿತು' ಎಂದು ಸಲಹೆ ಇತ್ತರು. ಒಂದು ಕ್ಷಣ ಗಲಿಬಿಲಿಗೆ ಒಳಗಾದರೂ, ಆ ಮಗುವಿನ ತಾಯಿ ಮರುಮಾತನಾಡದೆ ಇ.ಎನ್.ಟಿ ವೈದ್ಯರನ್ನು ಸಂಪರ್ಕಿಸಿದಳು.

ಇ.ಎನ್.ಟಿ ವೈದ್ಯರು ಮಗುವಿನ ಕಿವಿ ಮತ್ತು ಗಂಟಲನ್ನು ಪರೀಕ್ಷಿಸಿದರು. 'ಮಗುವಿಗೆ ಕೇಳಿಸಿಕೊಳ್ಳುವಿಕೆಯಲ್ಲಿ ತೊಂದರೆ ಇದೆ, ಇದಕ್ಕೆ ಕಾರಣ ಮಗುವಿನ ಶ್ರವಣೇಂದ್ರಿಯ ನರದಲ್ಲಿ ಆಗಿರುವ ಹಾನಿ. ಹಾನಿಯ ಪ್ರಮಾಣ